1111/ ~~1111~~

# ಉಪ ತಹಶೀಲ್ದಾರರು ನಾಡ ಕಾರ್ಯಾಲಯ ಚೋರನೂರು ಇವರ ನಡುವಳಿಗಳು

ಉಪಸ್ಥಿತಿ : ಶ್ರೀ ಗುರುರಾಜ ದೇಸಾಯಿ ಉಪ ತಹಶೀಲ್ದಾರರು ಚೋರನರು

ವಾದಿಗಳು : ಶ್ರೀ ಜೆ. ಕುಮಾರಸ್ವಾಮಿ ತಂದೆ ದಿ॥ ಜರ್ಮಲಿ ಮಲಿಯಪ್ಪ ಸಾ॥ ಯರ್ರಯ್ಯನಹಳ್ಳಿ

// ವಿರುದ್ಧ //

ಪ್ರತಿವಾದಿಗಳು : ಎಸ್. ಅಂಜಿನಪ್ಪ ಕೆ. ಮಲಿಯಪ್ಪ ಜಿ. ಸುರ್ಯಕಿರಣ ಓಬಣ್ಣ, ಸಾ॥ ಯ್ರಯ್ಯನಹಳ್ಳಿ

**ಪೀಠಿಕೆ :** ಈ ಮೇಲಿನ ವಿಷಯದ ಕುರಿತು ಸಂಡೂರು ತಾಲೂಕಿನ ಸಬ್ ರಿಜಿಸ್ಟರ್ ಸಂಡೂರು ಇವರಿಂದ ಜೆ. ಕುಮಾರಸ್ವಾಮಿ ತಂದೆ ಜಗ್ಮಲಿ ಮಲಿಯಪ್ಪ ಇವರು ಷಣ್ಮುಖಪ್ಪ ತಂದೆ ಗುರುಸಿದ್ದಪ್ಪ ಯರ್ರಯ್ಯನಹಳ್ಳಿ ಇವರಿಂದ ದಿನಾಂಕ : 15–09–2015 ರಂದು ಖಂಡಿತ ಕ್ರಯ ಖರಿದಿಯಾಗಿರುತ್ತದೆ.

ಇದರನ್ವಯ ಸಂಡೂರು ತಾಲೂಕು ಕಛೇರಿ ಇವರಿಂದ ವರ್ಗಾವಣೆಗಾಗಿ ನಮೂನೆ 21ನ್ನು ದಿನಾಂಕ : 18–09–2015 ರಂದು ಗಣಕೀಕರಣ ಶಾಖೆಯಿಂದ ಚೆಕ್‌ಲಿಸ್ಟನ್ನು ತೆಗೆದು ಕಂದಾಯ ನಿರೀಕ್ಷಕರು ಚೋರನೂರು ಇವರಿಗೆ ವರ್ಗಾವನೆ ಮಾಡಲು ಕಳುಹಿಸಿ ಕೊಡಲಾಗಿತ್ತು. ಕಂದಾಯ ನಿರೀಕ್ಷಕರು ಚೋರನೂರು ಇವರು ಹಕ್ಕು ಬದಲಾವಣೆಗಾಗಿ ಸಂಬಂದಪಟ್ಟವರ ಮೇಲೆ ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ ದಿನಾಂಕ : 19–10–2015 ರಂದು ಮುಟೇಶನ್ ನಂ:10 ವಹಿವಾಟು ಸಂಖ್ಯೆ :38ಕ್ಕೆ ಈ ಮೇಲೆ ಹೆಸರಿಸಿದ ವಿರುದ್ದದಾರರು ತಕರಾರು ಅರ್ಜಿ ಸಲ್ಲಿಸಿದ ಮೇರೆಗೆ ಕಂದಾಯ ನಿರೀಕ್ಷಕರು ಚೋರನೂರು ಇವರು ತಕರಾರು ಬಂದ ಪ್ರಯುಕ್ತ ತಕರಾರು ಪ್ರಕರಣವೆಂದು ಹಕ್ಕು ಬದಲಾವಣೆ ಮಾಡದೇ ತಕರಾರು ಪ್ರಕರಣವನ್ನು ವಿಚಾರಣೆ ಮಾಡಲು ಉಪ ತಹಶೀಲ್ದಾರರು ಚೋರನೂರು ಇವರಿಗೆ ಕಳುಹಿಸುವುದು ಎಂದು ಷರಾ ನಮೂದಿಸಿ ತಹಶೀಲ್ದಾರರ ಕಾರ್ಯಾಲಯ ಸಂಡೂರು ಇವರಿಗೆ ವಾಪಸ್ ಕಳುಹಿಸಿರುತ್ತಾರೆ. ಕಂದಾಯ ನಿರೀಕ್ಷಕರು ಚೋರನೂರು ಇವರ ಷರಾದ ಅನ್ವಯ ತಹಶೀಲ್ದಾರರು ಸಂಡೂರು ಇವರು ಉಪ ತಹಶೀಲ್ದಾರರು ಚೋರನೂರು ಇವರಿಗೆ ಈ ಪ್ರಕರಣದ ಕುರಿತು ವಿಚಾರಣೆಗಾಗಿ ಮೂಲ ಕಡತವನ್ನು ಕಳುಹಿಸಿರುತ್ತಾರೆ.

ಈ ಹಿನ್ನೆಲಯಲ್ಲಿ ನಾಡ ಕಾರ್ಯಾಲಯ ಚೋರನೂರಿನಿಂದ ಸಂಬಂಧಪಟ್ಟ ಉಭಯೇತರರಿಗೆ ದಿನಾಂಕ : 30–11–2015 ರಂದು ನೋಟಿಸನ್ನು ಜಾರಿ ಮಾಡಿ ದಿನಾಂಕ : 05–11–2015 ರಂದು ಪ್ರಕರಣದ ವಿಚಾರಣೆಗಾಗಿ ಹಾಜರಾಗಲು ತಿಳಿಸಲಾಗಿತ್ತು,

ದಿನಾಂಕ : 05–12–2015ರಂದು ವಾದಿ ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಗೂ ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ನೀಡುವುದಾಗಿ ತಿಳಿಸಿದ್ದರಿಂದ ದಿನಾಂಕ : 10–12–2015ಕ್ಕೆ ಪ್ರಕರಣದ ವಿಚಾರಣೆಯನ್ನು ಮುಂದೂಡಲಾಯಿತು.

(P.T.O)

ದಿನಾಂಕ : 10-12-2015 ರಂದು ಪ್ರಕರಣವನ್ನು ಕೂಗಿಸಲಾಯಿತು. ವಾದಿ ಶ್ರೀ ಜೆ. ಕುಮಾರಸ್ವಾಮಿ ಇವರು ತಮ್ಮ ಪರವಾಗಿ ಶ್ರೀ ಎಲ್.ಎಸ್. ಬಷೀರ್ ಅಹಮದ್ (ಎಲ್.ಎಸ್.ಬಿ) ನ್ಯಾಯವಾದಿಗಳು ಕೂಡ್ಲಿಗಿ ಇವರನ್ನು ನೇಮಕ ಮಾಡಿ ತಮ್ಮ ಪರವಾಗಿ ವಾದಿಸಲು ನ್ಯಾಯಾಲಯದಲ್ಲಿ ತಿಳಿಸಿದರು. ಹಾಗೂ ಶ್ರೀ ಎಲ್.ಎಸ್. ಬಷೀರ್ ಅಹಮದ್ ಇವರು ವಾದಿ ಪರವಾಗಿ ವಕಾಲತ್ ನಾಮದೊಂದಿಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಿ ಪ್ರತಿವಾದಿಗಳ ಅರ್ಜಿಯನ್ನು ತಿರಸ್ಕರಿಸಲು ಮನವಿ ಮಾಡಿರುತ್ತಾರೆ.

ತಕರಾರುದಾರರು ದಿನಾಂಕ : 23-12-2015 ರಂದು ಲಿಖಿತ ಹೇಳಿಕೆಯನ್ನು ಸಲ್ಲಿಸುವುದಾಗಿ ತಿಳಿಸಿದ ಮೇರೆಗೆ ದಿನಾಂಕ : 23-12-2015ಕ್ಕೆ ಪ್ರಕರಣವನ್ನು ವಿಚಾರಣೆಗೆ ಇಟ್ಟುಕೊಂಡು ಅಂದೇ ಆದೇಶವನ್ನು ಹೊರಡಿಸುವುದಾಗಿ ಉಭಯತರರಿಗೆ ತಿಳಿಸಲಾಯಿತು.

ದಿನಾಂಕ : 23-12-2015 ರಂದು ಪ್ರಕರಣವನ್ನು ಕೂಗಿಸಲಾಯಿತು. ಉಭಯೇತರರು ಹಾಜರಿದ್ದು, ತಕರಾರುದಾರರ ಪೈಕಿ ಶ್ರೀ ಕೆ. ಮಲಿಯಪ್ಪ ಇವರು ಗೈರು ಹಾಜರಾಗಿರುತ್ತಾರೆ.

ಅರ್ಜಿದಾರರು ದಿ : 15-09-2015 ರಂದು ಸರ್ಕಾರದ ನಿಗದಿಪಡಿಸಿದ ಮುದ್ರಾಂಕ ಶುಲ್ಕವನ್ನು ಭರಿಸಿ ದಾಸ್ತಾವೇಜು ಸಂ : ಎಸ್.ಎನ್.ಆರ್.100878/15-16 ಮೂಲಕ ನಿಯಮಾನುಸಾರ ಮಾರಟವಾಗಿರುತ್ತದೆಂದು ತಿಳಿಸಿರುತ್ತಾರೆ. ಖರಿದಿ ನೊಂದಣಿ ದಸ್ತಾವೇಜು ಪ್ರಕಾರ ಜೆ. ನಮೂನೆ ರೂಲ್ 44 ಮತ್ತು 63ರ ಮೇರೆಗೆ ತಿಳುವಳಿಕೆ ಪತ್ರ ಮತ್ತು ಅನುಬಂಧ -2 ಅನುಬಂಧ -1 ವ್ಯಾಲವೇಷನ್ ನಮೂನೆ 15 ಇವುಗಳನ್ನು ಕೂಡಾ ಪರಿಶೀಲನೆ ಮಾಡಲಾಯಿತು.

ಕಂದಾಯ ಅಧಿಕಾರಿಗಳಿಗೆ ಪಕ್ಷಕಾರರ ಹಕ್ಕು ಹಾಗೂ ಕಾನೂನಿನ ಮಾನ್ಯತೆ ಅಂದರೆ ಮರಣ ಶಾಸನ ಅಥವಾ ಕ್ರಯ ಪತ್ರದ ನೈಜತೆಯನ್ನು ನಿರ್ಣಯಿಸುವ ಅಧಿಕಾರ ಇರುವುದಿಲ್ಲ. ಅದು ಕೇವಲ ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಇರುತ್ತದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯವು ಕೆಲವೊಂದು ಪ್ರಕರಣಗಳಲಿ ಆದೇಶವನ್ನು ಹೊರಡಿಸಿದ್ದು ಅವುಗಳು

1) ಶ್ರೀಮತಿ ಪಾಪಮ್ಮ ವಿರುದ್ಧ ಜಿಲ್ಲಾಧಿಕಾರಿಗಳು ಮತ್ತು ಇತರರು ILR 2005(4)KAR577;2006(1) AIRKARR : 222;2005(4)KCCR 345 ರಲ್ಲಿ ಅಂತ ಪ್ರಕರಣಗಳ ಕುರಿತು ಉಲ್ಲೇಖಿಸಲಾಗಿದೆ. ಅದರಂತೆ ಇನ್ನೊಂದು ಪ್ರಕರಣದ ಯಾವುದೇ ಒಬ್ಬ ವ್ಯಕ್ತಿಯು ಖರೀದಿಸುವ ಸ್ವತ್ತನ್ನು ನೋಂದಾಯಿತ ದಾಸ್ತಾವೇಜು ಮುಖಾಂತರ ಅರ್ಜನೆ ಮಾಡಿದ್ದರೆ, ಅಂತಹ ಅರ್ಜಿಯನ್ನು ಸದರಿ ವ್ಯಕ್ತಿಯು ಕಂದಾಯ ಅಧಿಕಾರಿಗಳಿಗೆ ವರದಿ ಮಾಡಲು ಹೊಣೆಗಾರನಾಗತಕ್ಕವನಲ್ಲ. ಅಂತಹ ಹೊಣೆಯು ಅಥವಾ ಕರ್ತವ್ಯವು ಸಂಬಂಧ ನೊಂದಣಿ ಪ್ರಾಧಿಕಾರದ್ದಾಗಿರುತ್ತದೆ. ಎನ್. ಶಿವಣ್ಣ ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರು 1980 (1) KLJ419

ಮೊತ್ತೊಂದು ಪ್ರಕರಣದ ಸಂ : 2003(1) KCCRSN3 ಮಹೇಶ್ ವಿರುದ್ಧ ಉಪ ತಹಶೀಲ್ದಾರರು ನಾಡ ಕಛೇರಿ ದಂಬಾಲ.

ತಕರಾರು ದಾರರು ಸದರಿ ಭೂಮಿಯು ಇನಾಂ ಭೂಮಿ ಎಂದು ತಿಳಿಸಿ ಇದು ಬಸವೇಶ್ವರ ದೇವಸ್ಥಾನದ ಹೆಸರಿನಲ್ಲಿ ಇದ್ದು ಇದನ್ನು ಷಣ್ಮುಖಪ್ಪ ತಂದೆ ಗುರುಸಿದ್ದಪ್ಪ ಇವರು ಕಾನೂನು ಬಾಹಿರವಾಗಿ ಮಾರಾಟ ಮಾಡಿರುತ್ತಾರೆಂದು ಲಿಖಿತ

(P.T.O)

ಯಿಂದ ತಿಳಿಸಿರುತ್ತಾರೆ. ಆದರೆ ತಕರಾರುದಾರರು ಸಲ್ಲಿಸಿದ ಲಿಖಿತ ಹೇಳಿಕೆ ಅಂಶಗಳನ್ನು ಕೂಡಾ ಪರಿಶೀಲನೆ ಮಾಡಲಾಯಿತು ಆದರೆ ಈ ಪ್ರಕರಣದಲ್ಲಿಯ ದಾಖಲೆಗಳನ್ನು ಪರಿಸೀಲನೆ ಮಾಡಿದಾಗ ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯ್ದೆ 1977 (ಸಂಡೂರು ಇನಾಂ ರದ್ದಿಯಾತಿ ಕಾಯ್ದೆ 1977) ಕಲಂ 4 & 5 ರ ಅನ್ವಯ ಭೂ ನ್ಯಾಯ ಮಂಡಳಿ ಸಂಡೂರು ಇವರು ನಿಯಮಾನುಸಾರ ಆದೇಶ ಹೊರಡಿಸಿದ್ದರ ಮೇರೆಗೆ ಹಕ್ಕು ಬದಲಾವಣೆ ಮಾಡುವವರು ತಮ್ಮ ಹೆಸರಿಗೆ ಹಕ್ಕು ಪತ್ರವನ್ನು ಪಡೆದುಕೊಂಡು ನಿಯಮಾನುಸಾರವಾಗಿ ಸ್ವತ್ತನ್ನು ಅರ್ಜನೆ ಮಾಡಿಕೊಂಡಿರುತ್ತಾರೆ. ಎಂದು ತಿಳಿದುಕೊಂಡು ಮತ್ತು ಸದರಿ ಭೂಮಿಯ ಪಹಣಿ ಪರಿಶೀಲನೆ ಮಾಡಿದಾಗ ಪಹಣಿ ಕಾಲಂ 8ರಲ್ಲಿ ಪಟ್ಟಾ ಎಂದು ನೋಂದಣಿಯಾಗಿರುತ್ತದೆ ಎಂದು ತಿಳಿದುಕೊಂಡು ಹಾಗೂ ಈ ಮೇಲೆ ವಿವರಿಸಿದ ಮಾನ್ಯ ನ್ಯಾಯಾಲಯದ ಪ್ರಕರಣಗಳನ್ನು ಗಮನದಲ್ಲಿ ಇಟ್ಟುಕೊಂಡು ತಕರಾರುದಾರರ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಹಾಗೂ ತಕರಾರುದಾರರು ಈ ಆದೇಶದಿಂದ ಅಗ್ರೀವ್ಡ್ ಆದಲ್ಲಿ ತಮ್ಮ ಹವಾಲನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿ ದಾವಾ ಹೂಡಿ ಪರಿಹಾರವನ್ನು ಕಂಡೂಕೊಳ್ಳಬಹುದಾಗಿದೆ ಎಂದು ತಿಳಿಸುತ್ತಾ ಪೀಠೀಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಈ ಕೆಳಗಿನಂತೆ

**: ಆದೇಶ :**

**RRT/ತಕರಾರು/43/15-16** **ದಿನಾಂಕ : 23-12-2015**

ಯರ್ರಯ್ಯನಹಳ್ಳಿ ಗ್ರಾಮದ ಭೂಮಿ ಸ.ನಂ. 262/ಎ ದ ಕ್ಷೇತ್ರ 2-17ನಲ್ಲಿ ನೊಂದಾಯಿಸಿದ ಸಂ : SNR1 00878/15-16 ದಿನಾಂಕ : 15-09-2015 ರಂದು ದಸ್ತಾವೇಜು ಮೂಲಕ ಬಂದಿದ್ದು, ಕಾರಣ ವಹಿವಾಟು ಸಂ : 38 MR No : 10ನ್ನು ದಿನಾಂಕ : 18-09-2015ರಲ್ಲಿ ಎತ್ತಿ ಹಿಡಿದಿದೆ. ಮತ್ತು ಹಕ್ಕುಬದಲಾವಣೆ ಪಡೆದವರಾದ ಶ್ರೀ ಜೆ. ಕುಮಾರಸ್ವಾಮಿ ತಂದೆ ದಿ॥ ಜರ್ಮಲಿ ಮಲಿಯಪ್ಪ ಇವರ ಹೆಸರಿಗೆ ವರ್ಗಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ದಿನಾಂಕ : 23-12-2015ರಂದು ಘೋಷಿಸಲಾಯಿತು.

**ಉಪ ತಹಶೀಲ್ದಾರರು**
**ನಾಡ ಕಾರ್ಯಾಲಯ**
**ಚೋರನೂರು**

ಪ್ರತಿಗಳನ್ನು :-

1) ತಹಶೀಲ್ ಕಾರ್ಯಾಲಯದ ಭೂಮಿ ಕೇಂದ್ರದ ಗಣಕೀಕೃತ ಶಾಖೆಗೆ
2) ಅರ್ಜಿದಾರರಿಗೆ / ತಕರಾರುದಾರರಗೆ
3) ಕಂದಾಯ ನಿರೀಕ್ಷಕರು ಚೋರನೂರು / ಗ್ರಾಮ ಲೆಕ್ಕಾಧಿಕಾರಿ ಇವರಿಗೆ